Regd No M 1299 34 th Year ತಾ|| 30—3—51

# SATYAVADI

ಸತ್ಯವಾದಿ

ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ರಾಯರು [ ಬಿಡಿ ಪ್ರತಿ 3 ಪೈ

# ಹೆದರಾಬಾದ್ ನಿಜಾಂರ ಮೇಲೆ ಭಾರತ ಸರ್ಕಾರಕ್ಕೆ ದೂರು ?

# ಅರ್ಧ ಲಕ್ಷ ಟನ್ ಗೋಧಿ ತರಿಸೋದ್ರಲಿರೋ ತಾಪತ್ರಯ

### ದಿವ್ಯ ವಾಣಿ

ನೀವು ಮುನ್ನಡೆಯಿಡದಿದ್ದರೆ ನಿಮ್ಮನ್ನು ದೈವಿಕ ಶಕ್ತಿ ಘೋರ ದಂಡನೆಗೀಡು ಮಾಡುತ್ತದೆ ಮತ್ತು ನಿಮ್ಮ ಸ್ಥಾನದಲ್ಲಿ ಅದು ಇತರರನ್ನು ತಂದಿಡುತ್ತದೆ.

— ಕುರಾನ್

### ಬಟ್ಟೆ ಹತೋಟಿ ರದ್ದಾಗಲಿ

ಮೈಸೂರು ಪೌರಸಭೆಯಲ್ಲಿ ನಿನ್ನೆ ಬಟ್ಟೆ ನಿರ್ಣಯದ ಮೇಲೆ ಮಾತನಾಡುತ್ತ ಜನಾಬ್ ಅಹಮದ್ ಖಾರವರು, ಬಟ್ಟೆ ನಿಯಂತ್ರಣ ಹೋದರೆ ಸರಮೋತ್ತಮ ಅದರಿಂದ ಮೊದಲೆರಡು ತಿಂಗಳು ತ್ರಾಸವಾದರೂ ಮುಂದಕ್ಕೆ ಭಾರಿ ಸುಖವಿದೆ ಎಂದರು.

### ತಿರಸ್ಕಾರ

ಕಂಪು ಚೀನ ಸರ್ಕಾರ ಜ|| ಮೆಕಾರ್ಥರರ ಶಾಂತಿ ಸಂದೇಶವನ್ನು ತಿರಸ್ಕರಿಸಿತೆಂದು ಟೋಕಿಯೋ ವಾರ್ತೆ.

### ರಾಜಧಾನಿಯಲ್ಲಿ ರಾಜೇಂದ್ರರು

ಮುಂದಿನ ಮಾಹೆ 9 ರಲ್ಲಿ ಮದರಾಸಿನಿಂದ ಮೈಸೂರಿಗೆ ಬೆಳಿಗ್ಗೆ 10 ಗಂಟೆಗೆ ಆಗಮಿಸುವರು. ಸಚಿವರೊಡನೆ 11 ವರೆಗೆ ವಿಲಸನ. 4ಮುಕ್ಕಾಲು ಗಂಟೆಗೆ ನಾಗರಿಕ ಸ್ವಾಗತ. ಸಂಜೆ 6 ಗಂಟೆಗೆ ಚಾಮುಂಡಿಬೆಟ್ಟ ಪ್ರಾಸಾದದಲ್ಲಿ ಸಂತೋಷಕೂಟ. ರಾತ್ರಿ 8 ಗಂಟೆಗೆ ಕನ್ನಂಬಾಡಿ ಕಟ್ಟೆಯಲ್ಲಿ ಭೋಜನಕೂಟ. 9ಮು ಕ್ಕಾಲಿಗೆ ಚಾಮುಂಡಿಬೆಟ್ಟ 10 ನೇ ತಾ|| ಬೆಳಿಗ್ಗೆ 9 ವರೆಗೆ ವಿಶೇಷ ಸ್ಥಳ ಕೋತ್ಸವ. 11 ವರೆಗೆ ಬೆಂಗಳೂರಿಗೆ ವಿಮಾನದಲ್ಲಿ ಹಾರುವರು.

ಭಾರತ ಸರ್ಕಾರದ ಆಹಾರ ಶಾಖೆಯ ಉಪಸಚಿವರಾದ ಶ್ರೀ ಎಂ. ತಿರುಮಲರಾಯರು ಬೊಂಬಾಯಿನಲ್ಲಿ ಇತ್ತ ಹೇಳಿಕೆಯಲ್ಲಿ ಸೆಣಬಿಗೆ ಬದಲಾಗಿ ರಫ್ತು ಅರ್ಧ ಲಕ್ಷ ಟನ್ ಗೋಧಿ ಕೊಡುತ್ತೇನೆಂದು ತಿಳಿಸಿರುವ ಅಂಶ ಸರ್ಕಾರದ ಪರಿಶೀಲನೆಯಲ್ಲಿದೆಯೆಂದರು ಕೇವಲ ಕಚ್ಚಸೆಣಬನ್ನು ರಫ್ತು ಬದಲು ಕೇಳಿರುವದು ವ್ಯವಹಾರ ಕಷ್ಟವಾದುದೆಂದು ಅವರು ಅಭಿವ್ಯಾಯಪಟ್ಟಿದ್ದಾರೆ.

### ಭೀತಿ ಕಡಿಮೆಯಾಗಿದೆ

ಪಂ|| ನೆಹರು ಪಾರ್ಲಿಮೆಂಟಿನಲ್ಲಿ ನಿನ್ನೆ ಹೇಳಿಕೆ ಕೊಟ್ಟು ಕಳೆದ ಎರಡುಮೂರು ತಿಂಗಳಿಂದ ಯುದ್ಧಭೀತಿ ಇಳಿದಿದೆಯೆಂದರು.

### ಈ ದಿವಸ ವಿರೋಧ ವಕ್ತತೆ

ಭಾರತ ಪ್ರತಿನಿಧಿ ಸರ್ ಬಿ. ಎನ್. ರಾಯರು ಕಾಶ್ಮೀರ ಬಗ್ಗೆ ಬ್ರಿಟಿಷ್-ಅಮೇರಿಕ ನಿರ್ಣಯವನ್ನು ವಿರೋಧಿಸುವ ದಿನ ಇಂದು ಎಂದು ಲೇಕ್‌ಸಕ್ಸಸ್‌ನಿಂದ ಗೊತ್ತಾಗಿದೆ.

### ದೆಹಲಿ ಮೇಲೆ ವಿಮಾನ !

ನಿನ್ನೆ ಬೆಳಿಗ್ಗೆ ದೆಹಲಿ ಮೇಲೆ ವಿದೇಶ ವಿಮಾನವೊಂದು ಹಾರಿತು.

× ಸಿನಿಮಾ ಸ್ಥಾನಕ್ಕೆ ರೂ. 1 ವರೆಯಂತೆ ಸೀಟಿಂಗ್ ತೆರಿಗೆಯನ್ನು ಮೈಸೂರು ಸರ್ಕಾರ ವಿಧಿಸಿದೆ.

× ಭಾರತದ 3 ಸಹಸ್ರ ಚಿತ್ರಮಂದಿರಗಳಲ್ಲಿ ಕಳೆದ ಸಾಲಿನಲ್ಲಿ 50 ಕೋಟಿ ಮಂದಿ ಡಾಕ್ಯುಮೆಂಟ್ರಿ ಮತ್ತು ವಾರ್ತೆ ಚಿತ್ರ ನೋಡಿದ್ದಾರೆ.

## ಪೌರಸಭೆ

ಮೈಸೂರು ಪೌರಸಭೆಯ ಸಾಧಾರಣ ಅಧಿವೇಶನ ನಿನ್ನೆ ಸಂಜೆ ಶ್ರೀ ಟಿ. ನರಸಿಂಹಯ್ಯಂಗಾರ್ಯರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು.

### ಔಷಧಿ ಸರಬರಾಜು ಸರಿಯಾಗಲಿ

ಮೈಸೂರು ಸಿಟಿಯಲ್ಲಿರತಕ್ಕ ಮೊಹಲ್ಲ ಆಸ್ಪತ್ರೆಗಳಲ್ಲಿ ಔಷಧಿಯು ಸಾಮಾನುಗಳು ಇಲ್ಲದೆ ಬಡ ಜನಗಳಿಗೆ ಸರಿಯಾದ ( ಉತ್ತಮ ) ರೀತಿಯಲ್ಲಿ ಚಿಕಿತ್ಸೆ ನಡೆಸಲು ತೊಂದರೆಯಾಗಿರುತ್ತೆ. ಆದಕಾರಣ ಸರ್ಕಾರದವರು ಸದರಿ ಆಸ್ಪತ್ರೆಗಳಿಗೆ ಸಾಕಾದಷ್ಟು ಔಷಧಿಯು ಸಾಮಾನುಗಳನ್ನು ಸಪ್ಲೈ ಮಾಡಿ ಜನಗಳ ಸೌಕರ್ಯಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಈ ಸಭೆಯು ಸರ್ಕಾರವನ್ನು ಪ್ರಾರ್ಥಿಸುತ್ತದೆ - ಎಂಬ ನಿರ್ಣಯ ಅಂಗೀಕೃತವಾಯಿತು.

### ಯುಗಾದಿಗೆ ಬಟ್ಟೆ ಹಂಚಿಕೆ

ಮೈಸೂರು ನಗರದಲ್ಲಿ ಉಂಟಾಗಿರುವ ಗಿಂಡಿ ಬಟ್ಟೆ ಅಭಾವವನ್ನು ಸುಧಾರಿಸಲು, ' ಯುಗಾದಿ ' ಹಬ್ಬ ಸಹ ಇರುವವರಿಂದಲೂ ತೆರಿಗೆದಾರರಿಗೆ ಗಿಂಡಿ ಬಟ್ಟೆ ದೊರೆಯುವಂತೆ ಅಧಿಕೃತ ಚಿಲ್ಲರೆ ವ್ಯಾಪಾರಿಗಳ ಮೂಲಕ ಸರಬರಾಜಾಗುವಂತೆ ಸರ್ಕಾರ ಕ್ರಮ ಕೈಗೊಳ್ಳಬೇಕು ಮತ್ತು ಜಿಲ್ಲಾಧಿಕಾರಿಗಳು ಸಮಿತಿ ರಚಿಸಬೇಕು - ಎಂಬ ತಿದ್ದುಪಡಿ ನಿರ್ಣಯ ಅಂಗೀಕೃತವಾಯಿತು.

×

### ಅಭಾವಕಾಲದಲ್ಲೂ ನಷ್ಟ

ನ್ಯೂಸ್‌ಪ್ರಿಂಟ್‌ಗೆ ಈಗ ತೀವ್ರಾಭಾವ. ಇದರ ಜೊತೆಗೆ ಕಲ್ಕತ್ತಾದಲ್ಲಿ ನಿನ್ನೆ ಒಂದು ಲಕ್ಷ ರೂ. ಬಾಳುವ ಕಾಗದ ಸುಟ್ಟುಬೂದಿಯಾಯಿತು.

## ರೇಷ್ಮೆ ಹೆಚ್ಚಿಸಲು -

### ಈಗ ಸಾಧ್ಯವೇ ಇಲ್ಲ !

ಅಮೇರಿಕದಿಂದ ಧಾನ್ಯ ಬಂದ ನಂತರ ಶೇ 25 ಇಳುವರಿಯನ್ನು ತೆಗೆದು ಮುನ್ನೆಚ್ಚರಿಕೆ ಪಡಿತರ ಹಂಚಲಾಗುವದು - ಎಂದು ಬೊಂಬಾಯಿನಲ್ಲಿ ಶ್ರೀ ಬಿ. ತಿರುಮಲರಾವ್ ಹೇಳಿಕೆ ಇತ್ತಿರುವರು.

### ಕಮ್ಯುನಿಸಂ ನಾಶಕ್ಕೆ ಸಲಹೆ

ಸಮಾಜವಾದಿ ಪಕ್ಷದ ಶ್ರೀ ಜಯಪ್ರಕಾಶ್ ನಾರಾಯಣ್ ಬೊಂಬಾಯಿನಲ್ಲಿ ಹೇಳಿಕೆಯಿತ್ತು ವಿಶ್ವದ ಪ್ರತಿತಂತ್ರರಾಜ್ಯಗಳೆಲ್ಲ ಸಂಘಟಿತವಾಗಿ ಕಮ್ಯುನಿಸಂ ದಹನಕ್ಕೆ ಸೂಕ್ತ ಪರಿಸ್ಥಿತಿ ನಿರ್ಮಿಸಬೇಕು - ಎಂದಿರುವರು.

### ವಿಕ್ರಯ ಜರಗುತ್ತಿದೆ

ಪರ ರಾಜ್ಯಗಳಲ್ಲಿ ಹೈದರಾಬಾದಿನ ನಿಜಾಮರು ಅತ್ಯಧಿಕ ಮೌಲ್ಯದ ವಜ್ರ ಮುತ್ತಿತರ ಅಭರಣಗಳನ್ನು ವಿಕ್ರಯಮಾಡಿಸುತ್ತಿರುವದಾಗಿ ಪ್ರಬಲ ವದಂತಿ ಎದ್ದು, ವಿಕ್ರಯ ಮಾಡುತ್ತಿರುವದನ್ನು ತಡೆಗಟ್ಟಬೇಕೆಂದು ಭಾರತ ಸರ್ಕಾರಕ್ಕೆ ಅನೇಕ ಮಂದಿ ದೂರು ಕೊಟ್ಟಿರುವದಾಗಿ ಗೊತ್ತಾಗಿದೆ.

### ಕೋಟಿಗಟ್ಲೆ ಸಂಪಾದನೆ

ಹೋದ ವರ್ಷ ಭಾರತದ ಎಲ್ಲ ಚಿತ್ರಮಂದಿರಗಳಲ್ಲೂ ಉತ್ಪತ್ತಿಯಾಗಿರುವ ಒಟ್ಟು ರೂ. 18 ಕೋಟಿ ಎಂದು ದೆಹಲಿ ವಾರ್ತೆ.

### ವಿಫಲಯತ್ನದ ಬಗ್ಗೆ ನೆಹ್ರು ಸುಡಿ

ಮುಂದಿನ ತಿಂಗಳು ಮೊದಲಲ್ಲಿ ದೆಹಲಿಯಲ್ಲಿ ಸಮಾವೇಶವಾಗುವ ಭಾರತ ಕಾಂಗ್ರೆಸ್ ಸಭೆಯಲ್ಲಿ. ಕಾಂಗ್ರೆಸ್ ಸಂಘಟನೆಗೆ ತಮ್ಮ ವಿಫಲಯತ್ನವನ್ನು ಪಂ| ನೆಹರು ವಿವರಿಸಿ ನುಡಿಯುವರು.

### ಸರ್ಕಾರಿ ಪ್ರಕಟಣೆ

ಸಕ್ಕರೆಯನ್ನು ಕಾರ್ಡುದಾರರಿಗೆ 2 ತಿಂಗಳಿಗೆ ಆಗುವಷ್ಟನ್ನು ಒಟ್ಟಿಗೆ ಕೊಡಲಾಗುವುದೆಂದು ಬೆಂಗಳೂರಿನಿಂದ ಮೈಸೂರು ಸರ್ಕಾರ ಪ್ರಕಟಿಸಿದೆ.

### ದಾಸಪ್ಪನವರಿಗೆ ಅಧಿಕಾರ

ಸಚಿವ ಶ್ರೀ ಹೆಚ್. ಸಿ. ದಾಸಪ್ಪನವರು ಶ್ರೀ ಕೆ. ಸಿ. ರೆಡ್ಡಿಗಳ ಅನಾರೋಗ್ಯ ಪ್ರಯುಕ್ತ ತಾತ್ಕಾಲಿಕವಾಗಿ ಮುಖ್ಯಮಂತ್ರಿಗಳ ಅಧಿಕಾರ ಪಡೆದಿರುವರೆಂದು ಬೆಂಗಳೂರು ವಾರ್ತೆ.

### ಭಾರತ ಸರ್ಕಾರದ ಕಾಣಿಕೆ

ಭಾರತ ಸರ್ಕಾರ ಈ ಸಾಲಿನ ಧಾನ್ಯ ಕ್ಕಾಗಿ ಮೈಸೂರು ಸಂಸ್ಥಾನಕ್ಕೆ ರೂ. 5/50700 ಸಹಾಯ ದ್ರವ್ಯ ಕೊಡುವದೆಂದು ಬೆಂಗಳೂರು ವಾರ್ತೆ.

## ಹಲ್ಲು ಮುರಿಸಿಕೊಂಡ ಕಥೆ

ರಾಘವಾಂಕ ಕವಿಯು ಹರಿಶ್ಚಂದ್ರ ಕಾವ್ಯವನ್ನು ಬರೆದು ತನ್ನ ಗುರುವೂ ಆದ ಹರಿಹರ ಕವಿಯ ಕಡೆಗೆ ಒಯ್ದು ತೋರಿಸಿದನಂತೆ. ಹರಿಶ್ಚಂದ್ರನನ್ನು ಕಾವ್ಯದ ನಾಯಕನನ್ನಾಗಿ ಮಾಡಿ ಕಾವ್ಯ ರಚಿಸಿದ್ದು ಹರಹರನ ಮನಸ್ಸಿಗೆ ಬರಲಿಲ್ಲ. ಆಗ ಅತನು ಸಿಟ್ಟಿಗೆದ್ದು ರಾಘವಾಂಕನ ಕವಾಳಕ್ಕೆ ಹೊಡಿದನಂತೆ. ಅದರಿಂದಾಗಿ ರಾಘವಾಂಕನ ಐದು ಹಲ್ಲುಗಳು ಮುರಿದುಬಿದ್ದವು. ಮುಂದೆ ಅತನು ಸಿದ್ಧರಾಮ ಪುರಾಣ, ಸೋಮನಾಥ ಚರಿತ್ರೆ, ನರಭ ಚಾರಿತ್ರ, ಹರಿಹರ ಮಹತ್ವ— ಹೀಗೆ ಐದು ಕಾವ್ಯಗಳನ್ನು ರಚಿಸಿದಾಗ ಒಂದೊಂದಾಗಿ ಐದು ಹಲ್ಲುಗಳೂ ತಿರುಗಿ ಒಂದವಂತೆ. ಇದೊಂದು ನಮ್ಮ ಸಾಹಿತ್ಯ ಚರಿತ್ರೆಯಲ್ಲಿಯ ದಂತ ಕಥೆ. ಇದಕ್ಕೆ ಹಲ್ಲುಮುರಿದುಕೊಂಡ ಕಥೆ ಎಂದೂ ಅರ್ಥ ಹಚ್ಚಬಹುದು.

(ಕ ಸು.)

## ಪುರುಷನೂ ಕಾಮವಾಸನೆಯೂ

ಪುರುಷನಿಗೆ ಹಗಲಿರಳು ಕಾಮವಾಸನೆಯಲ್ಲಿ ತಲ್ಲೀನನಾಗಲು ಅಧಿಕಾರ ವಿಲ್ಲ. ಅತನು ಹೆಂಡತಿಯೊಡನೆ ಕುಳಿತು ಭೋಜನ ಮಾಡಬಾರದು ; ಅಕೆಯು ಭೋಜನಮಾಡುವಾಗಲೂ, ಶೀನುತ್ತಿರುವಲ್ಲಿಯೂ, ಅಳಿಸುತ್ತಿರುವಾಗಲೂ, ಸ್ವಸ್ಥಳಾಗಿ ಕುಳಿತಿರುವಲ್ಲಿಯೂ, ಕಣ್ಣಿಗೆ ಕಾಡಿಗೆ ಹಚ್ಚಿಕೊಳ್ಳುತ್ತಿರುವಲ್ಲಿಯೂ, ಸ್ನಾನಮಾಡುತ್ತಿರುವಲ್ಲಿಯೂ, ಬತ್ತಲೆಯಾಗಿರುವಲ್ಲಿಯೂ, ವಸ್ತ್ರ ಬದಲಾಯಿಸುತ್ತಿರುವಲ್ಲಿಯೂ, ಕೆರಿಗೆಯ ಸಮಯದಲ್ಲಿಯೂ ಗಂಡನಾದವನು ನಿಲ್ಲಬಾರದು ! ನೋಡಬಾರದು !! ಈ ರೀತಿಯಲ್ಲಿ ಸರ್ವೇಂದ್ರಿಯಗಳನ್ನು ಸ್ವಾಧೀನದಲ್ಲಿರಿಸಿಕೊಂಡು ಧರ್ಮೋಕ್ತಿಯಂತೆ ಜೀವನ ನಡೆಸುತ್ತಿರುವ ಗುಣವಂತ ಪುರುಷನ ಪ್ರಯತ್ನಕ್ಕೆ ಅಸಾಧ್ಯವಾದ ಕೆಲಸವು ಈ ಭೂಲೋಕದಲ್ಲಾಗಲೀ ಆಕಾಶದಲ್ಲಾಗಲೀ ಪಾತಾಳದಲ್ಲಾಗಲೀ ಸ್ವರ್ಗದಲ್ಲಾಗಲೀ ಯಾವುದೂ ಇಲ್ಲ.

— ಧರ್ಮಜೋಧ


ಉಡ್‌ಲ್ಯಾಂಡ್ಸ್ ಮನರಂಜನ 2 ನೇ ವಾರ

ವನಸುಂದರಿ ❁ Vanasundari

ಪಿ. ಯು ಚಿನ್ನಪ್ಪ, ಟಿ. ಆರ್. ರಾಜಕುಮಾರಿ, ಬಾಲಯ್ಯ ಪುಳಿಮೂಟೆ

ಕೃಷ್ಣ, ಮಧುರಂ, ಲಲಿತ, ಪದ್ಮಿನಿ ಅಭಿನಯಿಸಿರುವರು

ಅಮೋಘ ತಮಿಳು ಚಿತ್ರ — ಪ್ರತಿ ದಿನ 3 ಆಟಗಳು ; ಮ್ಯಾಟಿನಿ 3 ಗಂಟೆಗೆ

— ಬೆಳಗಿನ ಪ್ರದರ್ಶನ — 30—3—51 ರಿಂದ — 3 ದಿನಗಳು

"ಅಡ್ವೆಂಚರ್ಸ್ ಆಫ್ ಕ್ಯಾಪ್ಟನ್ ಮಾರ್ವೆಲ್" (ರಿಪಬ್ಲಿಕ್ ಸೀರಿಯಲ್)

ರಣಜಿತ್ ಕೀರ್ತಿಯುತ 4 ನೇ ವಾರ

ನರ್ಗಿಸ್, ದಿಲೀಪ್ ಕುಮಾರ್, ಮುನ್ವರ್ ಸುಲ್ತಾನ ಪಾತ್ರವಹಿಸಿರುವ

BABUL ❁ ಬಾ ಬು ಲ್

ಅಮೋಘ ಹಿಂದಿ ಚಿತ್ರ — — ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ — 30—3—51 ರಿಂದ 3 ದಿವಸಗಳು

"ದರ್ದ್" (ಹಿಂದಿ) ಪಾತ್ರ— ಮುನ್ವರ್ ಸುಲ್ತಾನ್, ಸೂರ್ಯಲು


Edited, Printed and Published by M. S. Krishna Rao. at the Satyavadi Press Chamrajpuram Mysore



# "ಗೋರಕ್ಷಣ"

ಪ್ರತಿ ತಿಂಗಳ ತಾ|| 1 ರಲ್ಲಿ ಪ್ರಕಟವಾಗುವ 'ಗೋರಕ್ಷಣ' ದಲ್ಲಿ ಗೋರಕ್ಷಣೆ, ಪಶ್ರಾಣಿದಯೆ, ಸಸ್ಯಾಹಾರ, ಪಶುವೈದ್ಯ, ಇವುಗಳನ್ನು ಕುರಿತಾದ ಲೇಖನಗಳು ಪ್ರಕಟಿಸಲ್ಪಡುವವು

ಪತ್ರಿಕೆಗೆ ಪೋಷಕರಾಗಿಯೂ, ಚಂದಾದಾರರಾಗಿಯೂ, ಲೇಖಕರಾಗಿಯೂ ಪ್ರಚಾರಕರಾಗಿಯೂ ಸಹಕಾರ ನೀಡುವ ಮಹನೀಯರಿಗೆ ವಂದನೆಗಳು.

ಅನುಕೂಲವಾದಂತೆಲ್ಲಾ ಪುಟ ಸಂಖ್ಯೆ ಹೆಚ್ಚಿಸಲಾಗುತ್ತೆ.

ವಿಳಾಸ: 'ಗೋರಕ್ಷಣ' ಸತ್ಯವಾದಿ ಆಫೀಸ್, ಮೈಸೂರು


Announcement

Theatre building old materials and furniture are being sold very cheap.

Apply to—
NEW OPERA TALKIES
MYSORE

ಸಿನೆಮಾ ಕಟ್ಟಡದ ಹಳೇ ಸಾಮಾನುಗಳೂ ಫರ್ನೀಚರುಗಳೂ ಸುಲಭ ಬೆಲೆಗೆ ಮಾರಾಟಕ್ಕಿವೆ.

ವಿವರಗಳಿಗೆ—
ನ್ಯೂ ಅಪೇರಾ ಟಾಕೀಸ್'
ಮೈಸೂರು

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತಪಾನ

— ತಯಾರಕರು —
ದಿ ಮೈಸೂರು ಇಂಡಸ್ಟ್ರಿಯಲ್
ಅಂಡ್ ಟೆಸ್ಟಿಂಗ್ ಲ್ಯಾಬೊರೇಟರಿ
ಲಿ ಮಿ ಟೆ ಡ್
ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು ITL ಗ್ರೈಪ್ ಸಿರಪ್